**ಚಾ.ಸಾಃ 30, ಪ್ರಾ.ಸಾಃ 07**

**ಸಾಕ್ಷಿಯನ್ನು ದಿನಾಂಕಃ 19-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ದಿಃ 31-07-2021 ರಂದು ಆರೋಪಿತರನ್ನು ಹಿಡಿದಾಗ ಅವರು ಬರುತ್ತಿದ್ದ ಮೋಟಾರ್ ಸೈಕಲನ್ನು ಸಿಬ್ಬಂದಿಯ ಸಹಾಯದಿಂದ ಠಾಣೆಗೆ ತರಲಾಗಿರುತ್ತದೆ. ಸದ್ರಿ ಬೈಕನ್ನು ಜಪ್ತು ಪಂಚನಾಮೆಯ ಮೂಲಕ ಮೂಲ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪಿ ಎಫ ಹಾಕಲಾಗಿರುತ್ತದೆ. ನನ್ನ ತನಿಖೆಯ ನಂತರ ಮುಂದಿನ ತನಿಖೆಯನ್ನು ಚಾ.ಸಾ. 14 ರವರಿಗೆ ವಹಿಸಿರುತ್ತೇನೆ. ದಿಃ 04-08-2020 ರಂದು ಆರೋಪಿತರನ್ನು ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ವಿವಿಧ ಪ್ರಕರಣಗಳ ಸ್ಥಳಗಳಿಗೆ ಭೇಟಿ ಮಾಡುವ ಕಾಲಕ್ಕೆ ಆರೋಪಿತನಿಂದ ಅಮಾನತ್ತುಪಡಿಸಿಕೊಂಡ ಬೈಕ್ ಠಾಣೆಯಲ್ಲಿಯೇ ಇತ್ತು. ಆರೋಪಿತರ ಮನೆಯ ಹತ್ತಿರ ಹೋದಾಗ ಕೃತ್ಯಕ್ಕೆ ಬಳಸಿದ ಕಾರ ಮತ್ತು 2 ರಾಡ್ ಜಪ್ತುಪಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ರಾಡಗಳನ್ನು ಕಳ್ಳತನಕ್ಕೆ ಉಪಯೋಗಿಸಿಲ್ಲ ಮತ್ತು ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಯಿಂದ ಅವರಿಗೆ ಸಂಬಂಧಪಟ್ಟ ಮೂಗುತಿಯನ್ನು ಅಮಾನತ್ತುಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ. 9 ರವರು ಆರೋಪಿತರಿಂದ ಕಳವು ಮಾಲುಗಳನ್ನು ಗಿರವಿ ಇಟ್ಟುಕೊಂಡಿದ್ದು, ಆರೋಪಿತರು ಕಷ್ಟ ಎಂದು ಹೇಳಿದ್ದರಿಂದ ಅವರು ಇಟ್ಟುಕೊಂಡಿದ್ದು, ಗಿರವಿ ಇಟ್ಟುಕೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ದಾಖಲೆ ಇದೆಯಾ ಎಂದು ನಾನು ಕೇಳಿರುತ್ತೇನೆ. ಆದರೆ ಅವರು ಕಷ್ಟ ಇದುದ್ದರಿಂದ ಇಟ್ಟುಕೊಂಡಿದ್ದೇವೆ ಯಾವುದೇ ದಾಖಲೆ ಇಲ್ಲ ಎಂದು ತಿಳಿಸಿರುತ್ತಾರೆ. ಚಾ.ಸಾ. 9 ನನಗೆ ಯಾವುದೇ ಕಳುವಿನ ಮಾಲು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಫೊಟೋ ಈ ಪ್ರಕರಣಕ್ಕೆ ಸಂಬಂಧಪಟ್ಟದ್ದೆ ಅಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕಳುವು ಪ್ರಕರಣಗಳು ಪೆಂಡಿಂಗ್ ಇರುವುದರಿಂದ ಮೇಲಾಧಿಕಾರಿಗಳ ಒತ್ತಡವನ್ನು ತಪ್ಪಿಸಿಕೊಳ್ಳಲು ಅಮಾಯಕರ ಮೇಲೆ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**